## 1. ಪ್ರಶ್ನೋತ್ತರ :

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು :**

**ಅಧ್ಯಕ್ಷರು :** ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಮಾನ್ಯ ತುಕಾರಾಂರವರು ಈಗ ಪ್ರಸ್ತುತ ಸದನದಲ್ಲಿ ಹಾಜರಿಲ್ಲ. ಮಾನ್ಯ ಬಿ.ಸಿ.ಪಾಟೀಲ್ ರವರು ಸಹ ಈಗ ಸದನದಲ್ಲಿ ಹಾಜರಿಲ್ಲ. ಮಾನ್ಯ ರಮೇಶ ಬಂಡಿಸಿದ್ದೇಗೌಡರವರು ಸಹ ಹಾಜರಿಲ್ಲ. ಅವರ ಪರವಾಗಿ ಮಾನ್ಯ ಸುನೀಲ್ ಹೆಗಡೆಯವರು ಪ್ರಶ್ನೆ ಕೇಳುತ್ತಾರೆ.

### ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಕೊತ್ತತ್ತಿ 2 ವೃತ್ತದ ಮಂಡ್ಯ ರಸ್ತೆಯಿಂದ ಮದ್ದೂರು ಗಡಿ ರಸ್ತೆಯವರೆಗೆ ಅಭಿವೃದ್ಧಿ ಕುರಿತು

**123 (1261) ಶ್ರೀ ರಮೇಶ ಬಂಡಿಸಿದ್ದೇಗೌಡ. ಎ.ಬಿ (ಶ್ರೀರಂಗ ಪಟ್ಟಣ) :** ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಕೊತ್ತತ್ತಿ 2ನೇ ವೃತ್ತದ 1) ಮಂಡ್ಯ ರಸ್ತೆಯಿಂದ ಮದ್ದೂರು ಗಡಿಯವರೆಗೆ ರಸ್ತೆ ತೀರಾ ಹದಗೆಟ್ಟಿದ್ದು (ಚೀರನಹಳ್ಳಿ, ತಗ್ಗಹಳ್ಳಿ ಮಾರ್ಗ) 2) ಎಂ.ಜಿ.ಎಂ. ರಸ್ತೆಯಿಂದ ಬೇಲೂರು, ಯರಳ್ಳಿ ರಸ್ತೆಗಳ ಅಭಿವೃದ್ಧಿಗಾಗಿ ಇಲ್ಲಿನ ಸಾರ್ವಜನಿಕರು ಪ್ರತಿಭಟನೆ ನಡೆಸುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದರೆ, ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಈ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಲು ಉದ್ದೇಶಿಸಿದೆಯೆ; ಹಾಗಿದ್ದಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು?

**ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :**

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ಕಾಮಗಾರಿಗಳ ಸಂಬಂಧ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಇ) ಮುಖ್ಯ ಇಂಜಿನಿಯರ್‌ರವರಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಪರಿಶೀಲಿಸಿ ಅನುದಾನದ ಲಭ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.

**ಶ್ರೀ ಸುನೀಲ್ ವಿ.ಹೆಗಡೆ (ಮಾನ್ಯ ರಮೇಶ ಬಂಡಿಸಿದ್ದೇಗೌಡ ಎ.ಬಿ.ರವರ ಪರವಾಗಿ)** : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊತ್ತತ್ತಿ 2ನೇ ವೃತ್ತದ ಮಂಡ್ಯ ರಸ್ತೆಯಿಂದ ಮದ್ದೂರು ಗಡಿಯವರೆಗೆ ರಸ್ತೆ ತೀರಾ ಹದಗೆಟ್ಟಿದ್ದು ಆದಷ್ಟು ಬೇಗನೇ ರಸ್ತೆ ಅಭಿವೃದ್ಧಿ ಮಾಡಿಸಿಕೊಡಬೇಕು. ಇದರ ಜೊತೆಗೆ ಎಂ.ಜಿ.ಎಂ. ರಸ್ತೆಯಿಂದ ಬೇಲೂರು ಮಾರ್ಗವಾಗಿ ಯರಳ್ಳಿ ರಸ್ತೆಗಳ ಅಭಿವೃದ್ಧಿಯನ್ನು ಕೂಡ ತೀವ್ರಗತಿಯಲ್ಲಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖೇನ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಸಿ.ಎಂ. ಉದಾಸಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಇಂಜಿನಿಯರ್‌ಗೆ ಈ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚನೆ ಮಾಡಲಾಗಿದೆ. ಆ ಪ್ರಸ್ತಾವನೆ ಬಂದ ಕೂಡಲೇ ಅನುದಾನದ ಲಭ್ಯತೆಯ ಮೇಲೆ ಅತೀ ಶೀಘ್ರದಲ್ಲಿ ಕೆಲಸ ಮಾಡಿಸಿಕೊಡುತ್ತೇನೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಅಧ್ಯಕ್ಷರು** : ಮಾನ್ಯ ಕಾಕಾ ಸಾಹೇಬ ಪಾಟೀಲ್‌ರವರು ಈಗ ಪ್ರಸ್ತುತ ಸದನದಲ್ಲಿ ಹಾಜರಿಲ್ಲ, ಮಾನ್ಯ ಮಂಜು ಎ.ರವರು ಹಾಜರಿಲ್ಲ, ಡಾ: ಶರಣ ಪ್ರಕಾಶ್ ಪಾಟೀಲರವರು ಹಾಜರಿಲ್ಲ, ಮಾನ್ಯ ವೀರಭದ್ರಪ್ಪ ಹಾಲಹರವಿ ಯವರು ಹಾಜರಿಲ್ಲ. ಮಾನ್ಯ ಅಮರೇಶ್ ರವರು ಪ್ರಶ್ನೆ ಕೇಳಿ.

**ಮುಳಬಾಗಲು ತಾಲ್ಲೂಕಿನ ರಸ್ತೆ ಅಭಿವೃದ್ಧಿಗೆ ವೆಚ್ಚ ಮಾಡಿದ ಮೊತ್ತ**

**128 (628) ಶ್ರೀ ಅಮರೇಶ್ (ಮುಳಬಾಗಿಲು)** : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09 ಮತ್ತು 2009ನೇ ಸಾಲಿನಲ್ಲಿ ಮುಳಬಾಗಿಲು ತಾಲ್ಲೂಕಿನಲ್ಲಿ ಎಷ್ಟು ಕಿಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತ ಎಷ್ಟು;

ಆ) ಈ ತಾಲ್ಲೂಕಿನಲ್ಲಿ ಬಹುಪಾಲು ರಸ್ತೆಗಳು ದುರಸ್ತಿಗೊಳ್ಳದೇ ಸಂಚಾರಕ್ಕೆ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಇ) ಹಾಗಿದ್ದಲ್ಲಿ ಈ ರಸ್ತೆಗಳನ್ನು ಆದ್ಯತೆ ಮೇರೆಗೆ ದುರಸ್ತಿ ಮಾಡಿಸಲು ಸರ್ಕಾರ ರೂಪಿಸಿರುವ ಕಾರ್ಯ ಯೋಜನೆಗಳೇನು?